ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೫ Part – V	ಬೆಂಗಳೂರು, ಗುರುವಾರ, ೦೩, ಸೆಪ್ಟೆಂಬರ್, ೨೦೨೬ (ಭಾದ್ರಪದ ೧೨, ಶಕವರ್ಷ, ೧೯೪೮) BENGALURU, THURSDAY, 03 SEPTEMBER, 2026 (BHADRAPADA 12, SHAKAVARSHA, 1948)	ನಂ. ೮೪೫ No. 845

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ
ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾ ಉಪನಿರ್ದೇಶಕರು [ಆಡಳಿತ],
ಬೆಂಗಳೂರು ಉತ್ತರ ಜಿಲ್ಲೆ

ಸಂಖ್ಯೆ:ಸಿ1/ಪ.ಪ್ರಾ.ಶಾ.ಶಿ.ನೇ/59/2026-27 **ದಿನಾಂಕ : 03/09/2026**

ಸೇರ್ಪಡೆ ಅಧಿಸೂಚನೆ

ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8 ನೇ ತರಗತಿ) (ರಾಜ್ಯ ಮಟ್ಟ ಸ್ಥಳೀಯ ವೃಂದದ ಶೇ 8% ರಷ್ಟು ಹುದ್ದೆಗಳಿಗೆ ಸಂಬಂಧಿಸಿದಂತೆ) ವೃಂದದ ಹುದ್ದೆಗಳಿಗೆ ಹಾಗೂ ಗಣಕ ವಿಜ್ಞಾನ ಶಿಕ್ಷಕರ (1 ರಿಂದ 8ನೇ ತರಗತಿ) ಹುದ್ದೆಗಳ ನೇಮಕಾತಿಯ ಸಂಬಂಧ ದಿನಾಂಕ:12.08.2026 ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಗೆ ಈ ಕೆಳಕಂಡ ಅಂಶಗಳನ್ನು ಸೇರ್ಪಡೆಗೊಳಿಸಿದ್ದು, ಅದರಂತೆ ಓದಿಕೊಳ್ಳತಕ್ಕದ್ದು.

ಅಧಿಸೂಚನೆಯಲ್ಲಿರುವುದು	ಸೇರ್ಪಡೆಯಂತೆ ಓದಿಕೊಳ್ಳತಕ್ಕದ್ದು
ಅಧಿಸೂಚನೆ ಪುಟ ಸಂಖ್ಯೆ:10ರ ಕಂಡಿಕೆ:12 ರ **ಮೀಸಲಾತಿ: ಉಪಕಂಡಿಕೆ (A)ರಲ್ಲಿ ಜಾತಿ ಮೀಸಲಾತಿ ಪ್ರಮಾಣ ಪತ್ರಗಳು ಸಲ್ಲಿಸುವ ಸಂಬಂಧ** ಮಾಹಿತಿ ನೀಡಿರುವ ಕೋಷ್ಟಕದ **ಕ್ರ.ಸಂ.03 ರಲ್ಲಿ** **" ಪ್ರವರ್ಗ –II(a), II(b), III(a), ಮತ್ತು III(b), ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್ ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಲು ತಿಳಿಸಲಾಗಿದೆ".**	ಸರ್ಕಾರದ ಆದೇಶ ಸಂಖ್ಯೆ: ಹಿಂವಕ 232 ಬಿಸಿಎ 2026 ಬೆಂಗಳೂರು ದಿ:01/09/2026 ರಲ್ಲಿ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಉದ್ಯೋಗದ ಮೀಸಲಾತಿಗಾಗಿ ನೇರ ನೇಮಕಾತಿ ಸಂದರ್ಭದಲ್ಲಿ ವಿವಾಹಿತ ಮಹಿಳೆ /ಪುರುಷ ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಿತರಿಸಲು ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು. **"ವಿವಾಹಿತ ಮಹಿಳಾ/ಪುರುಷ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ತಂದೆ ತಾಯಿಗಳ ಉತ್ಪನ್ನ ಸೇರಿಸಬಾರದು. ಅಂಥ ಪ್ರಕರಣಗಳಲ್ಲಿ ಪತಿ ಪತ್ನಿಯರು ಒಂದು ಸ್ವಾಯತ್ತ ಕುಟುಂಬದಂತೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಲ್ಲಿ ಅರ್ಜಿದಾರಳ/ನ ಉತ್ಪನ್ನಕ್ಕೆ ಅವಳ/ಅವನ ಪತಿ/ಪತ್ನಿಯ ಉತ್ಪನ್ನವನ್ನು ಸೇರಿಸಬೇಕು. ಅವರು ಅವಿಭಕ್ತ ಕುಟುಂಬದ ಅಂಗವಾಗಿ ವಾಸಿಸುತ್ತಿದ್ದರೆ, ಅರ್ಜಿದಾರಳ /ನ ಉತ್ಪನ್ನ ಮತ್ತು ಅವಿಭಕ್ತ ಕುಟುಂಬದ ಉತ್ಪನ್ನವನ್ನು ಒಟ್ಟಿಗೆ ಸೇರಿಸಿ ಕುಟುಂಬದ ಉತ್ಪನ್ನವನ್ನು ಕಂಡುಹಿಡಿಯಬೇಕು."** **ಅದರಂತೆ,** ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ –II(a), II(b), III(a), ಮತ್ತು III(b), ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು **ನಮೂನೆ-ಎಫ್** ರಲ್ಲಿ ಪಡೆದು ಸದರಿ ನೇಮಕಾತಿಯ ಅರ್ಜಿಯೊಂದಿಗೆ ಲಗತ್ತಿಸಿ, ಸಲ್ಲಿಸುವುದು. ಅದರಂತೆ ಓದಿಕೊಳ್ಳತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

	ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ –II(a), II(b), III(a), ಮತ್ತು III(b), ವರ್ಗಗಳಿಗೆ ಸೇರಿದ ವಿವಾಹಿತ ಮಹಿಳಾ/ಪುರುಷ ಅಭ್ಯರ್ಥಿಗಳು ಈ ಮೇಲಿನ ಸರ್ಕಾರಿ ಆದೇಶದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸದೇ ಆನ್‌ಲೈನ್ ಅರ್ಜಿಯನ್ನು, Submit ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನಿಯಮದಂತೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಸದಾಗಿ Upload ಮಾಡಲು Online ಅರ್ಜಿಯಲ್ಲಿ **Edit ಗೆ ಅವಕಾಶ ನೀಡಿದೆ.** ಹಾಗೂ ಅರ್ಜಿ ಸಲ್ಲಿಸುವ **ಕೊನೆಯ ದಿನಾಂಕವನ್ನು ಸಹ ದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕ ಇತ್ಯರ್ಥಪಡಿಸಿಕೊಳ್ಳಲು ಕೊನೆಯ ದಿನಾಂಕ:28/09/2026 ರವರೆಗೆ ವಿಸ್ತರಿಸಿದೆ.** ಅಭ್ಯರ್ಥಿಗಳು **Edit option** ಅನ್ನು ಬಳಸಿಕೊಂಡು ನಿಯಮದಂತೆ ತಮ್ಮ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವನ್ನು ಲಗತ್ತಿಸಿ, ಅರ್ಜಿ ಸಲ್ಲಿಸುವುದು.
ಅಧಿಸೂಚನೆಯಲ್ಲಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:07/09/2026 ಹಾಗೂ ಶುಲ್ಕ ಪಾವತಿಸಿರುವ ಶುಲ್ಕವನ್ನು ಖಚಿತಪಡಿಸಿಕೊಳ್ಳಲು ನಿಗದಿಪಡಿಸಿದ ಕೊನೆಯ ದಿನಾಂಕ:10/09/2026 ಆಗಿರುತ್ತದೆ.	ಅಭ್ಯರ್ಥಿಗಳು **ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:25/09/2026 ಹಾಗೂ ಪಾವತಿಸಿದ ಶುಲ್ಕವನ್ನು ಇತ್ಯರ್ಥ ನಿಗದಿಪಡಿಸಿದ ದಿ:28/09/2026** ಎಂದು ಓದಿಕೊಳ್ಳತಕ್ಕದ್ದು. ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದಂತೆ ಅಭ್ಯರ್ಥಿಗಳು ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಅರ್ಜಿಯೊಂದಿಗೆ Upload ಮಾಡಿರಬೇಕು.
ನೇಮಕಾತಿ ಅಧಿಸೂಚನೆ ಪುಟ ಸಂಖ್ಯೆ:02 ಮತ್ತು 19ರಲ್ಲಿ ಇಲಾಖಾ ವೆಬ್‌ಸೈಟ್ ವಿಳಾಸ:**https://schooleducation.karnic.in** ಎಂದು ಮುದ್ರಿತವಾಗಿರುತ್ತದೆ.	ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ ವಿಳಾಸ **https://schooleducation.karnataka.gov.in** ಎಂದು ಓದಿಕೊಳ್ಳತಕ್ಕದ್ದು.

ಸಹಿ/-
ನೇಮಕಾತಿ ಪ್ರಾಧಿಕಾರ ಹಾಗೂ ಉಪನಿರ್ದೇಶಕರು (ಆಡಳಿತ),
ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU Date: 2026.09.04 00:51:28 +05'30'